

# ಪ್ರತಿಭೆಗೆ ಅವಕಾಶ

**ಯಜ್ಞ ಶೆಟ್ಟಿ**

ಝೀ ಕನ್ನಡದ 'ವಾರಸ್ದಾರ'ದ ಭವಾನಿ

★ *ಅಭಿನಯಕ್ಕೆ ಸಿದ್ಧತೆ ಹೇಗಿತ್ತು? ಆರಂಭದ ದಿನಗಳು ಹೇಗಿದ್ದವು?*

ನನ್ನ ಸಹೋದರ ಫ್ಯಾಷನ್ ಡಿಸೈನರ್. ಅವರ ಹೊಸ ಡಿಸೈನ್‌ಗಳಿಗೆ ಮಾಡೆಲಿಂಗ್ ಮಾಡುತ್ತಿದ್ದೆ. ಹೀಗಿದ್ದವಳಿಗೆ ಇದ್ದಕ್ಕಿದ್ದಂತೆ 'ಒಂದು ಪ್ರೀತಿ ಕಥೆ'ಗೆ ಅವಕಾಶ ಸಿಕ್ಕಿತು. ಅದನ್ನು ನಿಭಾಯಿಸಿದೆ. ಅದಾದ ಮೇಲೆ 'ಎದ್ದೇಳು ಮಂಜುನಾಥ' ಮಾಡಿದೆ. ಅಭಿನಯದತ್ತ ಆಸಕ್ತಿ ಹೆಚ್ಚಾಯಿತು. ಇದರಲ್ಲೇ ತೊಡಗಿದೆ.

ಶಾಸ್ತ್ರೀಯವಾಗಿ ಕಲಿಯದಿದ್ದರೂ ಮೊದಲಿನಿಂದ ಡಾನ್ಸ್ ಮಾಡುತ್ತಿದ್ದೆ. ಸಭಾ ಕಂಪನ ಎನ್ನುವುದು ಎಂದೂ ನನ್ನನ್ನು ಕಾಡಿಲ್ಲ. ಅಭಿನಯಕ್ಕೆ ಬಂದ ನಂತರ ನನಗೆ ಯಾವುದು ಕಷ್ಟ ಅಂತ ಅನ್ನಿಸಿಯೇ ಇಲ್ಲ. ಇದಕ್ಕಾಗಿ ಯಾವುದೇ ತರಬೇತಿಯನ್ನು ಪಡೆದಿಲ್ಲ. ಇತ್ತೀಚೆಗೆ ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದೇನೆ

★ *ಭವಾನಿಯ ಬಗ್ಗೆ ಹೇಳುವುದಾದರೆ?*

ಭವಾನಿ ಪಾತ್ರ ಸವಾಲಿನ ಪಾತ್ರ. ಅದರಲ್ಲಿ ಪ್ರತಿಭೆಯನ್ನು ಹೊರಹೊಮ್ಮಿಸಲು ಹೆಚ್ಚು ಅವಕಾಶ ಇದೆ. ಸಾಮಾಜಿಕ ಸಮಸ್ಯೆಗಳನ್ನು ಕಥೆ ಒಳಗೊಳ್ಳುತ್ತಾ ಆ ಬಗ್ಗೆ ಜಾಗೃತಿ ಮೂಡಿಸುತ್ತದೆ. ಭ್ರೂಣ ಹತ್ಯೆಯ ಅಮಾನವೀಯತೆಯನ್ನು, ಸ್ತ್ರೀ ವಾರಸುದಾರಿಕೆಯನ್ನೂ ಪ್ರತಿಪಾದಿಸುತ್ತದೆ. ಒಟ್ಟಾರೆ ನನಗೆ ತುಂಬಾ ಇಷ್ಟವಾಗಿದೆ.

★ *ಸಿನಿಮಾದಿಂದ ಟಿವಿ ಹಿನ್ನಡೆ ಅನ್ನಿಸುತ್ತಾ?*

ಅದು ಅವರವರ ದೃಷ್ಟಿಕೋನಕ್ಕೆ ಬಿಟ್ಟಿದ್ದು. ಪ್ರತಿಭೆ ಪ್ರದರ್ಶನಕ್ಕೆ ಅವಕಾಶವನ್ನು ನೋಡುತ್ತೇನೆ ವಿನಃ ಬೇರೆ ಇನ್ನೇನೂ ಅಲ್ಲ. ಪಾತ್ರದ ಸಾಮರ್ಥ್ಯವನ್ನು ನೋಡುತ್ತೇನೆ. ನಟ-ನಿರ್ದೇಶಕ ಸುದೀಪ್ 'ವಾರಸ್ದಾರ' ನಿರ್ಮಿಸುತ್ತಿದ್ದಾರೆ. ಗಡ್ಡ ವಿಜಿ ನಿರ್ದೇಶಿಸುತ್ತಿದ್ದಾರೆ. ಕಥೆಯಷ್ಟೇ ಬ್ಯಾನರ್ ಕೂಡ ಇಷ್ಟ ಆಯಿತು. ಒಬ್ಬ ಹೆಣ್ಣು ಮಗುವನ್ನು ಹುಡುಗನಂತೆ ಬೆಳೆಸುವುದು ಸವಾಲಿನ ಕೆಲಸ. ಮಕ್ಕಳಲ್ಲಿ ಭೇದ ಭಾವವನ್ನು ಬಿತ್ತುತ್ತಿರುವಾಗ ಇದು ಒಳ್ಳೆಯ ಕೆಲಸ ಅಂದುಕೊಂಡಿದ್ದೇನೆ. ಸಿನಿಮಾ– ಟಿವಿ ಅನ್ನುವುದಕ್ಕಿಂತ ಪಾತ್ರವಾಗಿ ಹೇಗೆ ಜನರ ಮನಸ್ಸನ್ನು ಮುಟ್ಟುತ್ತೇನೆ ಎನ್ನುವುದು ಮಾತ್ರ ನನಗೆ ಮುಖ್ಯ. ಏಕಕಾಲದಲ್ಲಿ ಹಲವು ಕೆಲಸಗಳನ್ನು ನಾನು ಒಪ್ಪುವುದೇ ಇಲ್ಲ. ನಿರ್ವಹಿಸುವ ಕೆಲಸಕ್ಕೆ ಸಂಪೂರ್ಣ ನ್ಯಾಯ ಒದಗಿಸಬೇಕು. ಕಳೆದ ಎಂಟು ವರ್ಷಗಳಲ್ಲಿ 15 ಸಿನಿಮಾ ಮಾಡಿದ್ದೇನೆ ಅಷ್ಟೆ.

★ *ಪಾತ್ರದ ಆಯ್ಕೆಗೆ ಕೊಡುವ ಪ್ರಾಮುಖ್ಯತೆ ಏನು?*

ಪಾತ್ರಕ್ಕೆ ಚಿಕ್ಕದ್ದು ದೊಡ್ಡದ್ದು ಎನ್ನುವ ವ್ಯತ್ಯಾಸ ಇಲ್ಲ. ಕಥೆಯಲ್ಲಿ ಪಾತ್ರಕ್ಕೆ ಬಹುದೊಡ್ಡ ಪ್ರಾಮುಖ್ಯತೆ ಇರಲೇ ಬೇಕು ಎಂದೂ ಇಲ್ಲ. ಪಾತ್ರವನ್ನು ನಿರ್ವಹಿಸುವ ಒಬ್ಬ ಕಲಾವಿದೆಯಾದ ನನಗೆ ಅದರಲ್ಲಿ ಎಲ್ಲಿಯೂ ಕೃತ್ರಿಮ ಕಾಣಿಸಬಾರದು.

■ ರಾಗು